ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

## e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 10 ಜನವರಿ – ಮಾರ್ಚ್ 2025 ಸಂಚಿಕೆ: 1

### ಪಿ.ಎಂ. ಕಿಸಾನ್ ಸಮ್ಮಾನ್ ನಿಧಿ (19ನೇ ಕಂತಿನ) ಸಮಾರಂಭ






ಭಾರತ ಸರ್ಕಾರದ ಕೃಷಿ ಸಚಿವಾಲಯದ ಸಹಯೋಗದೊಂದಿಗೆ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಕೊನೇಹಳ್ಳಿಯ ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರವು (ತುಮಕೂರು–I) ಫೆಬ್ರವರಿ 24, 2025 ರಂದು ತಿಪಟೂರಿನ ಗುರುಕುಲಾನಂದ ಆಶ್ರಮ ಕಲ್ಯಾಣ ಮಂಟಪದಲ್ಲಿ 19 ನೇ ಕಂತಿನ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಕಾರ್ಯಕ್ರಮವನ್ನು ಆಯೋಜಿಸಿತು. ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಸಚಿವಾಲಯದ ರಾಜ್ಯ ಸಚಿವರಾದ ಗೌರವಾನ್ವಿತ ವಿ. ಸೋಮಣ್ಣ ಅವರ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 19 ನೇ ಕಂತಿನ ಹಣವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಯಿತು. ರೈತ ಸಮುದಾಯಕ್ಕೆ ಇದು ಒಂದು ಮಹತ್ವದ ಸಂದರ್ಭವಾಗಿತ್ತು. ಗೌರವಾನ್ವಿತ ಪ್ರಧಾನ ಮಂತ್ರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಈ ಕಂತಿನ ಮೂಲಕ ದೇಶಾದ್ಯಂತ 9.8 ಕೋಟಿ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ರೂ. 22,000 ಕೋಟಿ ಹಣವನ್ನು ವಿತರಿಸಲಾಯಿತು.

ಪ್ರಧಾನಿ ಮೋದಿ ತಮ್ಮ ಭಾಷಣದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ರೈತರ ಕಲ್ಯಾಣಕ್ಕೆ ಸರ್ಕಾರದ ಅಚಲ ಬದ್ಧತೆಯನ್ನು ಎತ್ತಿ ತೋರಿಸಿದರು. ಕಳೆದ ಆರು ವರ್ಷಗಳಲ್ಲಿ ಪಿಎಂ–ಕಿಸಾನ್ ಯೋಜನೆಯಡಿಯಲ್ಲಿ ಸುಮಾರು ರೂ. 3.7 ಲಕ್ಷ ಕೋಟಿಗಳನ್ನು ನೇರವಾಗಿ ರೈತರಿಗೆ ವರ್ಗಾಯಿಸಲಾಗಿದೆ ಎಂದು ಒತ್ತಿ ಹೇಳಿದರು. ಬಿಹಾರದ ಸುಮಾರು 75 ಲಕ್ಷ ರೈತ ಕುಟುಂಬಗಳು ಈ ಕಂತಿನ ಪ್ರಯೋಜನವನ್ನು ಪಡೆದಿವೆ ಎಂದು ಅವರು ತಿಳಿಸಿದರು, ಒಟ್ಟಾರೆಯಾಗಿ ಸುಮಾರು ರೂ. 1,600 ಕೋಟಿಗಳನ್ನು ರೈತ ಕುಟುಂಬಗಳು ಪಡೆದಿವೆ. ಇದಲ್ಲದೆ, ಈ ಕಾರ್ಯಕ್ರಮವು ದೇಶದಲ್ಲಿಯ 10,000 ರೈತ ಉತ್ಪಾದಕ ಸಂಸ್ಥೆ ಸ್ಥಾಪನೆಯನ್ನು ಗುರುತಿಸಿದೆ, ಇದು ರೈತರನ್ನು ಸಬಲೀಕರಣಗೊಳಿಸುವ ಮತ್ತು ಸಹಕಾರಿ ಕೃಷಿ ಪದ್ಧತಿಗಳನ್ನು ಉತ್ತೇಜಿಸುವಲ್ಲಿ ಮಹತ್ವದ ಮೈಲಿಗಲ್ಲು ಎಂದು ಅವರು ತಿಳಿಸಿದರು,

ತುಮಕೂರು ಜಿಲ್ಲೆಯಾದ್ಯಂತ ಸುಮಾರು 2.5 ಲಕ್ಷ ಫಲಾನುಭವಿ ರೈತರ ಖಾತೆಗಳಿಗೆ ಒಟ್ಟು ರೂ. 48.79 ಕೋಟಿಗಳನ್ನು ವರ್ಗಾಯಿಸಲಾಗುತ್ತಿದೆ ಎಂದು ಗೌರವಾನ್ವಿತ ಸಚಿವ ಶ್ರೀ ಸೋಮಣ್ಣ ತಿಳಿಸಿದರು. ಈ ಆರ್ಥಿಕ ನೆರವು ರೈತರ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುತ್ತದೆ ಮತ್ತು ಕೃಷಿ ಅಭಿವೃದ್ಧಿಗೆ ಸಹಾಯ ಮಾಡುತ್ತದೆ ಎಂದು ಅವರು ಒತ್ತಿ ಹೇಳಿದರು. ಈ ವರ್ಷದ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ ಹಲವಾರು ಯೋಜನೆಗಳನ್ನು ಅವರು ತಿಳಿಸಿದರು, ರೈತರು ಅವುಗಳ ಸಂಪೂರ್ಣ ಪ್ರಯೋಜನವನ್ನು ಪಡೆಯುವಂತೆ ಒತ್ತಾಯಿಸಿದರು. ಈ ಉಪಕ್ರಮಗಳಲ್ಲಿ, ಸರ್ಕಾರವು 100 ಜಿಲ್ಲೆಗಳಲ್ಲಿ ಪ್ರಧಾನ ಮಂತ್ರಿ ಧನ್ಧಾನ್ಯ ಕೃಷಿ ಯೋಜನೆಯನ್ನು ಪ್ರಾರಂಭಿಸಲು ಯೋಜಿಸಿದೆ ಮತ್ತು ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲದ ಮಿತಿಯನ್ನು ರೂ. 3 ಲಕ್ಷದಿಂದ ರೂ. 5 ಲಕ್ಷಕ್ಕೆ ಹೆಚ್ಚಿಸಿದೆ. ಹೆಚ್ಚುವರಿಯಾಗಿ, ಸ್ಥಿರ ರಸಗೊಬ್ಬರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಅಸ್ಸಾಂನಲ್ಲಿ 12.7 ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ ಯೂರಿಯಾ ಸ್ಥಾವರವನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿದರು.











ಕಿಸಾನ್ ಸಮ್ಮಾನ್ ಕಾರ್ಯಕ್ರಮದ ಸಂದರ್ಭದಲ್ಲಿ, ಕೃಷಿಯಲ್ಲಿ ಮಹತ್ವದ ಮೈಲಿಗಲ್ಲುಗಳನ್ನು ಸಾಧಿಸಿದ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕೃಷಿ ಪ್ರದರ್ಶನವೂ ಇತ್ತು, ಅಲ್ಲಿ ವಿವಿಧ ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳು, ಮಹಿಳಾ ಸ್ವಸಹಾಯ ಸಂಘಗಳು, ರೈತ ಉತ್ಪಾದಕ ಕಂಪನಿಗಳು ಮತ್ತು ಉದ್ಯಮಿಗಳು ಸಕ್ರಿಯವಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಶಾಸಕರಾದ ಜ್ಯೋತಿ ಗಣೇಶ್, ಸುರೇಶ್ ಗೌಡ, ಪುರಸಭೆ ಅಧ್ಯಕ್ಷೆ ಯಮುನಾ ಧರಣೇಶ್, ರವಿ ಹೆಬ್ಬಾಕ, ಕಂದಾಯ ಅಧಿಕಾರಿಗಳಾದ ಪವನ್ ಕುಮಾರ್, ವಿಸ್ತರಣಾ ನಿರ್ದೇಶಕರಾದ ಡಾ. ಶಿವಲಿಂಗಯ್ಯ, ಪ್ರಧಾನ ವಿಜ್ಞಾನಿಗಳಾದ ಡಾ. ಎಂ.ಜೆ. ಚಂದ್ರೇಗೌಡ ಸೇರಿದಂತೆ ಹಲವಾರು ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಹೆಚ್ಚುವರಿಯಾಗಿ, ದಿಶಾ ಸಮಿತಿಯ ಅಧ್ಯಕ್ಷರಾದ ಶಿವಪ್ರಸಾದ್, ಡಾ. ವಿ. ಗೋವಿಂದ ಗೌಡ, ಕೆ.ವಿ.ಕೆ. ತುಮಕೂರು–೨ ರ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## 18ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ

ದಿನಾಂಕ 27.01.2025 ರಂದು ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆಯ 18ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯು ಡಾ. ವೈ. ಎನ್. ಶಿವಲಿಂಗಯ್ಯ, ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ, ಜಿ.ಕೆ.ವಿ.ಕೆ., ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿಯ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ವಿ. ಗೋವಿಂದ ಗೌಡ ರವರು ವೈಜ್ಞಾನಿಕ ಸಲಹಾ ಸಮಿತಿಯ ಅಧ್ಯಕ್ಷರನ್ನು, ಸದಸ್ಯರನ್ನು, ವಿವಿಧ ಇಲಾಖೆಯ ಅಧಿಕಾರಿಗಳನ್ನು ಹಾಗೂ ರೈತ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿದರು.

ಡಾ. ವೈ. ಎನ್. ಶಿವಲಿಂಗಯ್ಯ, ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ, ಜಿ.ಕೆ.ವಿ.ಕೆ., ಬೆಂಗಳೂರು ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕೃಷಿ ವಿಜ್ಞಾನ ಕೇಂದ್ರವು ರೈತಾಪಿ ಕುಟುಂಬಗಳ ನಡುವೆ ನಿಂತು ಮತ್ತಷ್ಟು ಕೃಷಿ ಸಂಬಂಧಿತ ಕಾರ್ಯಚಟುವಟಿಕೆಗಳನ್ನು ನಡೆಸಬೇಕಿದ್ದು, ಇದು ಯಶಸ್ವಿಯಾಗಲು ಎಲ್ಲಾ ಅಭಿವೃದ್ಧಿ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಪ್ರಗತಿಪರ ರೈತರ ಸಹಕಾರ ಬಹುಮುಖ್ಯವೆಂದು ತಿಳಿಸಿದರು. ತುಮಕೂರು ಜಿಲ್ಲೆ ಪ್ರಮುಖವಾಗಿ ಮಳೆಯಾಶ್ರಿತ ಜಿಲ್ಲೆಯಾಗಿದ್ದು, ಕೆ.ವಿ.ಕೆ.ಯು ಖುಷ್ಕಿ ತೋಟಗಾರಿಕೆ, ಸಿರಿಧಾನ್ಯ ಬೆಳೆಗಳ ಉತ್ಪಾದನೆ ಜೊತೆಗೆ ಸಸ್ಯ ಸಂರಕ್ಷಣೆ, ವೈಜ್ಞಾನಿಕ ಕೊಯ್ಲೋತ್ತರ ಕ್ರಮಗಳು, ಶೇಖರಣೆ ಮತ್ತು ಮೌಲ್ಯವರ್ಧನೆ ಕುರಿತು ಕೌಶಲ್ಯಾಧಾರಿತ ತರಬೇತಿಗಳನ್ನು ಒದಗಿಸುವುದರ ಕಡೆ ಹೆಚ್ಚು ಒತ್ತು ನೀಡಬೇಕೆಂದರು. ಮುಂದುವರೆದು, ಕೆ.ವಿ.ಕೆ ಇದುವರೆಗೂ ಕೈಗೊಂಡ ಕಾರ್ಯಚಟುವಟಿಕೆಗಳು ಮತ್ತು ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳ ಕುರಿತು ಎಲ್ಲಾ ಸದಸ್ಯರು ಸಲಹೆ ನೀಡಬೇಕೆಂದು ಆಹ್ವಾನಿಸಿದರು.

ಸಮಿತಿಯ ಸದಸ್ಯರು ಆದ, ಕೃಷಿ ತಂತ್ರಜ್ಞಾನ ಅಳವಡಿಕೆ ಮತ್ತು ಸಂಶೋಧನಾ ಕೇಂದ್ರದ ಪ್ರಧಾನ ವಿಜ್ಞಾನಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರದ ನೋಡಲ್ ಅಧಿಕಾರಿಗಳಾದ ಡಾ. ಎಂ. ಜೆ. ಚಂದ್ರೇಗೌಡ ಇವರು ಪ್ರಾಸ್ತಾವಿಕ ನುಡಿಯಲ್ಲಿ ಕೇಂದ್ರದ ಕಾರ್ಯೋದ್ದೇಶಗಳು ಹಾಗೂ ವೈಜ್ಞಾನಿಕ ಸಲಹಾ ಸಮಿತಿಯ ಉದ್ದೇಶಗಳನ್ನು ವಿಸ್ತಾರವಾಗಿ ಸಭೆಗೆ ತಿಳಿಸಿದರು. ಡಾ. ವಿ. ಗೋವಿಂದ ಗೌಡ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು 17ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯ ನಿರ್ಣಯಗಳಿಗೆ ಕೈಗೊಂಡ ಕ್ರಮಗಳನ್ನು ಮಂಡಿಸಿ, ಅನುಮೋದನೆಯನ್ನು ಪಡೆದುಕೊಂಡರು. ಮುಂದುವರೆದು ಹಾಗೂ ಜನವರಿ 2024 ರಿಂದ ಡಿಸೆಂಬರ್ 2024 ರವರೆಗೆ ಕೈಗೊಂಡ ಕ್ಷೇತ್ರ ಪರೀಕ್ಷೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ತರಬೇತಿ ಕಾರ್ಯಕ್ರಮಗಳು ಮತ್ತು ಇತರೆ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.









# ಅಂತರಾಷ್ಟೀಯ ಮಹಿಳಾ ದಿನಾಚರಣೆ 2025 ಅಂಗವಾಗಿ ಅಣಬೆ ಕೃಷಿ ತರಬೇತಿ




ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ವತಿಯಿಂದ ಮಾರ್ಚ್ 8 ಅಂತರಾಷ್ಟೀಯ ಮಹಿಳಾ ದಿನಾಚರಣೆ 2025 ಅಂಗವಾಗಿ ಅಣಬೆ ಕೃಷಿಯ ಕೌಶಲ್ಯಾಧರಿತ ತರಬೇತಿ ಹಾಗೂ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಹಾಗಲವಾಡಿಯಲ್ಲಿ ಸ್ವಸಹಾಯ ಗುಂಪುಗಳಿಗೆ ಅಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಾ. ಪಿ. ಬಿ. ಸಿಂಧು, ವಿಜ್ಞಾನಿಗಳು (ಗೃಹ ವಿಜ್ಞಾನ)ರವರು ನೆರೆದಿದ್ದ ಮಹಿಳೆಯರಿಗೆ ಅಂತರಾಷ್ಟೀಯ ಮಹಿಳಾ ದಿನಾಚರಣೆ ಶುಭಾಶಯಗಳನ್ನು ಕೋರುತ್ತ ಈ ದಿನದ ಪ್ರಾಮುಖ್ಯತೆಯನ್ನು ವಿವರಿಸಿದರು.

ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸುವ ಮೂಲಕ ಸಮಾಜದ ಒಟ್ಟು ಅಭಿವೃದ್ಧಿಯನ್ನು ತಲುಪಲು ಸಹಾಯ ಮಾಡುತ್ತದೆ. ಸಮತೋಲನ ಸಮಾಜ ನಿರ್ಮಾಣಕ್ಕೆ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಒತ್ತು ನೀಡುವ ಸಲುವಾಗಿ ಈ ವರ್ಷ ಅಂತರಾಷ್ಟೀಯ ಮಹಿಳಾ ದಿನಾಚರಣೆಯನ್ನು " ಎಲ್ಲಾ ಮಹಿಳೆಯರು ಮತ್ತು ಹುಡುಗಿಯರ ಹಕ್ಕುಗಳು, ಸಮಾನತೆ ಮತ್ತು ಸಬಲೀಕರಣ" ಎಂಬ ಘೋಷ್ಠಿಯೊಂದಿಗೆ ಆಚರಿಸಲಾಗಿದೆ.



ಕಾರ್ಯಕ್ರಮದಲ್ಲಿ ಅಣಬೆ ಕೃಷಿಯ ಮಹತ್ವ, ವಿವಿಧ ರೀತಿಯ ಅಣಬೆಗಳು, ಪೋಷಕಾಂಶಗಳು, ಮೌಲ್ಯವರ್ಧಿತ ಉತ್ಪನ್ನಗಳು ಹಾಗೂ ಆರ್ಥಿಕ ಪ್ರಯೋಜನಗಳು ಇತ್ಯಾದಿ ಅಂಶಗಳ ಬಗ್ಗೆ ಡಾ. ಪಿ. ಬಿ. ಸಿಂಧುರವರು ಸವಿಸ್ತಾರವಾಗಿ ತಿಳಿಸಿದರು. ಅಣಬೆ ಕೃಷಿಯ ಪ್ರಮುಖ ಲಕ್ಷಣಗಳು ಕಡಿಮೆ ಹೂಡಿಕೆ, ಹೆಚ್ಚು ಲಾಭ, ಚಿಕ್ಕ ಸ್ಥಳದಲ್ಲೂ ಬೆಳೆಯುವ ಅವಕಾಶ, ಪೌಷ್ಟಿಕಾಂಶದಿಂದ ಸಮೃದ್ದ ಆಹಾರ, ವ್ಯಾಪಾರ ಹೆಚ್ಚುವಿಕೆ ಅವಕಾಶಗಳು ಹಾಗೂ ಮಹಿಳಾ ಸ್ವಯಂ ಉದ್ಯೋಗಕ್ಕೆ ಅನುಕೂಲ ಎಂದು ಹೇಳಿದರು.

ಅಣಬೆ ಕೃಷಿಯು ಶೇ. 90% ನೀರಿಲ್ಲದ ಕೃಷಿಯಾಗಿದ್ದು, ಇದು ಪರಿಸರಕ್ಕೆ ಸೂಕ್ತವಾಗಿರುತ್ತದೆ ಮಹಿಳೆಯರು ಮನೆಮಟ್ಟದಲ್ಲಿ ಅಥವಾ ಕೈಗಾರಿಕಾ ಮಟ್ಟದಲ್ಲಿ ಇದನ್ನು ಯಶಸ್ವಿಯಾಗಿ ಮಾಡಬಹುದು ಎಂಬುದರ ಬಗ್ಗೆ ತಿಳಿಸಲಾಯಿತು. ಈ ತರಬೇತಿ ಕಾರ್ಯಕ್ರಮದಿಂದ ಗ್ರಾಮೀಣ ಮಹಿಳೆಯರು ಕೇವಲ ಕೃಷಿಯಲ್ಲಿ ಮಾತ್ರವಲ್ಲ ಸ್ವಾವಲಂಬನೆ ಮತ್ತು ಸೃಜನಾತ್ಮಕ ಉದ್ಯಮಶೀಲತೆಯತ್ತ ಒಲವು ತೋರಿಸಲು ಸಹಾಯವಾಯಿತು ಹಾಗೂ ಸಮಾನತೆ, ಆರ್ಥಿಕ ಅಭಿವೃದ್ಧಿ ಹಾಗೂ ಸಬಲಿಕರಣದತ್ತ ಮಹಿಳೆಯರ ಹೆಜ್ಜೆ ಇಡಲು ಪ್ರೇರೇಪಿಸಿತು.

ಅಣಬೆಯಲ್ಲಿ ಪ್ರೋಟೀನ್ ಹೇರಳವಾಗಿರುವುದರಿಂದ ಇದು ಮಹಿಳೆಯರ ಸ್ನಾಯು ಆರೋಗ್ಯ ಮತ್ತು ಶಕ್ತಿ ವೃದ್ಧಿಗೆ ಸಹಾಯಕಾರಿ. ರಕ್ತಹೀನತೆ ತಡೆಯಲು ಅಗತ್ಯವಾದ ಕಬ್ಬಿಣ, ಮೂಳೆಗಳ ಆರೋಗ್ಯಕ್ಕೆ ಕ್ಯಾಲ್ಸಿಯಂ ಹಾಗೂ ವಿಟಮಿನ್ ಡಿ, ರಕ್ತದೊತ್ತಡ ನಿಯಂತ್ರಣಕ್ಕೆ ಪೋಟ್ಯಾಸಿಯಂ ಹಾಗೂ ಹಲವಾರು ಮುಖ್ಯ ಪೋಷಕಾಂಶಗಳನ್ನು ಅಣಬೆ ಒಳಗೊಂಡಿದೆ. ಈ ತರಬೇತಿ ಹಾಗೂ ಪ್ರಾತ್ಯಕ್ಷಿಕೆ ಮಹಿಳೆಯರಲ್ಲಿ ಆರ್ಥಿಕ ಸ್ವಾಯತ್ತತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವುದು ಮಾತ್ರವಲ್ಲ, ಹಳ್ಳಿಗಳಲ್ಲಿ ಕೃಷಿ ಆಧಾರಿತ ಸಣ್ಣ ಕೈಗಾರಿಕೆಗಳನ್ನು ಬೆಳೆಸಲು ಸಹಾಯ ಮಾಡಲಿದೆ. ಆತ್ಮನಿರ್ಭರ ಮಹಿಳಾ ಸಮುದಾಯ ನಿರ್ಮಾಣಕ್ಕೆ ಇದು ಪ್ರಮುಖ ಹೆಜ್ಜೆಯಾಗಲಿದೆ ಎಂದು ಡಾ. ಪಿ. ಬಿ. ಸಿಂಧು ತಿಳಿಸಿದರು.

ಅಂತರಾಷ್ಟೀಯ ಮಹಿಳಾ ದಿನದ ಅಂಗವಾಗಿ ಆಯೋಜಿಸಿದ ಈ ವಿಶೇಷ ಕಾರ್ಯಕ್ರಮವು ಮಹಿಳೆಯರ ಹಿತಾಸಕ್ತಿ ಮತ್ತು ಸ್ವಾವಲಂಬನೆಗೆ ಪೂರಕವಾದ ಮಾಹಿತಿಯನ್ನು ನೀಡುವುದರ ಮೂಲಕ ಪ್ರಭಾವಶೀಲವಾದ ಬೆಳವಣಿಗೆಗೆ ಕಾರಣವಾಯಿತು.

ಅಣಬೆ ಉತ್ಪಾದನೆ ಹಾಗೂ ಸಂಸ್ಕರಣೆ ಕುರಿತು, ಹಾಗಲವಾಡಿಯ ನವ ಉದ್ಯಮಿಯಾಗಿ ಹೊರ ಹೊಮ್ಮುತ್ತಿರುವ ಗಂಗಲಕ್ಷ್ಮೀರವರು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಸುಮಾರು 30ಕ್ಕೂ ಹೆಚ್ಚು ಮಹಿಳೆಯರು ಹಾಗೂ ಆಸಕ್ತ ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅಡಿಕೆಯಲ್ಲಿ ಅಂತರ ಬೆಳೆಗೆ ಹೆಚ್ಚು ಪ್ರಾಮುಖ್ಯತೆ ನೀಡಿ



ಇತ್ತೀಚಿನ ದಿನಗಳಲ್ಲಿ ರೈತರು ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆ ಬೆಳೆಯನ್ನು ಬೆಳೆಯಲು ಆಸಕ್ತರಾಗಿದ್ದು, ತುಮಕೂರು ಜಿಲ್ಲೆಯಲ್ಲಿ ಅಡಿಕೆಯ ವಿಸ್ತೀರ್ಣ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸಾಮಾನ್ಯವಾಗಿ ರೈತರು ಅಡಿಕೆಯನ್ನು 9 ಅಡಿ ಥ 9 ಅಡಿಅಂತರದಲ್ಲಿ ನಾಟಿ ಮಾಡುತ್ತಿದ್ದು, ಅಂತರ ಬೆಳೆ ಬೆಳೆಯಲ್ಲಿ ಸಾಕಷ್ಟು ಗಾಳಿ ಬೆಳಕು ಮತ್ತು ಸ್ಥಳದ ಲಭ್ಯತೆ ಸಾಕಷ್ಟಿರುತ್ತದೆ. ಅಡಿಕೆ ಬೆಳೆಯ ಮುಖ್ಯ ಸಮಸ್ಯೆ ಎಂದರೆ ಸಸಿಗಳನ್ನು ನಾಟಿ ಮಾಡಿದ ನಂತರ ಮೊದಲ ಇಳುವರಿ ನೀಡಲು ಧೀರ್ಘಕಾಲ ತೆಗೆದುಕೊಳ್ಳುತ್ತದೆ.

ಈ ಅವಧಿಯಲ್ಲಿ ಅಂತರ ಬೆಳೆಯಾಗಿ ಹೆಬ್ಬಾಳ ಅವರಿ, ಅಲಸಂಧೆ, ಚೆಂಡು ಹೂ. ತಿಂಗಳ ಹುರುಳಿ, ಬಾಳೆ ಮುಂತಾದ ಬೆಳೆಗಳನ್ನು ಬೆಳೆಯುವುದರಿಂದ ಅಧಿಕ ಲಾಭ ಗಳಿಸಬಹುದು.

ಈ ನಿಟ್ಟಿನಲ್ಲಿ ಕೃಷಿ ವಿಜ್ಞಾನ ಕೇಂದ್ರ, ತಿಪಟೂರು ವತಿಯಿಂದ 10 ಜನ ರೈತರಿಗೆ ಅಡಿಕೆಯಲ್ಲಿ ಅಂತರ ಬೆಳೆಯಾಗಿ ತಿಂಗಳ ಹುರುಳಿ ಅರ್ಕಾ ಶರತ್ ತಳಿಯನ್ನು ಪರಿಚಯ ಮಾಡಲಾಗಿತ್ತು. ಈ ತಳಿಯು ನಾಟಿ ಮಾಡಿದ 30 –35 ದಿನಗಳಲ್ಲಿ ಹೂವಾಗಿ 45 ರಿಂದ 50 ದಿನಕ್ಕೆ ಕಟಾವಿಗೆ ಬರುತ್ತದೆ. ಅಂತರ ಬೆಳೆಯಾಗಿ ಬೆಳೆದಾಗ ಸರಿಸುಮಾರು 6 –8 ಟನ್ ನಷ್ಟು ಇಳುವರಿ ಬರುತ್ತದೆ ಮತ್ತು ಮಾರುಕಟ್ಟೆಯಲ್ಲಿ ಸಹ ಉತ್ತಮ ಬೇಡಿಕೆಯಿದೆ. ಚಿಕ್ಕಅಡಿಕೆ ಮದ್ಯೆ ರೈತರು ಜಾಗವನ್ನು ಖಾಲಿ ಬಿಡುವ ಬದಲು ತಿಂಗಳ ಹುರುಳಿಯನ್ನು ಬೆಳೆದರೆ ಕಡಿಮೆ ಅವಧಿಯಲ್ಲಿ ಅಧಿಕ ಲಾಭ ಗಳಿಸಬಹುದು ಎಂದು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಡಾ. ಕೀರ್ತಿಶಂಕರ್‌ರವರು ತಿಳಿದರು.

## ಬೇಸಿಗೆಗೆ ಹಾಗೂ ಬರ ಸಹಿಷ್ಣತೆ ಹೊಂದಿದ ಮಧ್ಯಮ ಅವಧಿ ರಾಗಿ ತಳಿ ಎಂ.ಎಲ್.–322

ರಾಗಿಯು ಪ್ರಮುಖ ಆಹಾರ ಬೆಳೆಯಾಗಿದ್ದು, ಕರ್ನಾಟಕದ ರೈತರು ಪ್ರಮುಖ ಆಹಾರ ಬೆಳೆಯಾಗಿ ಬೆಳೆಯುತಿದ್ದಾರೆ. ಈ ಬೆಳೆಯನ್ನು ಖುಷ್ಕಿ ಮತ್ತು ನೀರಾವರಿ ಬೇಸಾಯ ಕ್ರಮದಲ್ಲಿ ಮುಖ್ಯ ಮತ್ತು ಅಂತರ ಬೆಳೆಯನ್ನಾಗಿ ಬೆಳೆದು ಉತ್ತಮ ಇಳುವರಿಯನ್ನು ಪಡೆಯಬಹುದು. ರಾಗಿಯು ಉತ್ತಮ ಪೌಷ್ಠಕಾಂಶಗಳನ್ನು ಹೊಂದಿದ್ದು, ದೇಹಕ್ಕೆ ಬೇಕಾದ ಕಡಿಮೆ ಕ್ಯಾಲೋರಿ, ಸಕ್ಕರೆ ಅಂಶ ಹಾಗೂ ಅಧಿಕ ಕ್ಯಾಲ್ಸಿಯಂ, ಕಬ್ಬಿಣ, ಪಿಷ್ಠ, ನಾರಿನಾಂಶ ಮತ್ತು ಪ್ರೋಟೀನನ್ನು ಒದಗಿಸುತ್ತದೆ.



ಇದನ್ನು ಹೆಚ್ಚಾಗಿ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಉತ್ತರಾಂಚಲ, ಓರಿಸ್ಸಾ ಮತ್ತು ಬಿಹಾರ ರಾಜ್ಯಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ರೈತರು ಬೆಳೆಯುತ್ತಿರುವ ರಾಗಿ ತಳಿಗಳು ಬರ ಸಹಿಷ್ಣತಾ ಶಕ್ತಿಯನ್ನು ಹೊಂದಿಲ್ಲದ ಕಾರಣ ಖುಷ್ಕಿ ಬೇಸಾಯದಲ್ಲಿ ಇಳುವರಿ ಕಡಿಮೆಯಾಗಿ ರೈತರು ನಷ್ಟ ಅನುಭವಿಸುತ್ತಿದ್ದಾರೆ.

ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರಿನ ಅನುವಂಶೀಯತೆ ಮತ್ತು ಸಸ್ಯ ತಳಿಶಾಸ್ತ್ರ ವಿಭಾಗದಲ್ಲಿ ಖುಷ್ಕಿ ಬೇಸಾಯದಲ್ಲಿ ಬರಸಹಿಷ್ಣತೆ, ಮಧ್ಯಮ ಅವಧಿ ಹಾಗೂ ಬೇಸಿಗೆಗೆ ಜನವರಿ 15 ರಿಂದ ಫೆಬ್ರವರಿ 15 ರವರೆಗೆ ಬಿತ್ತನೆ ಮಾಡಲು ಸೂಕ್ತವಾದ ಮಧ್ಯಮ ಅವಧಿ ರಾಗಿ ತಳಿಯನ್ನು 2023 ರಲ್ಲಿ ಬಿಡುಗಡೆ ಮಾಡಲಾಗಿದೆ. ಈ ತಳಿಯು ಒಣ ಹವಾಗುಣಕ್ಕೆ ಉತ್ತಮವಾಗಿ ಹೊಂದಿ ಕೊಂಡಿರುತ್ತದೆ ಇದರ ಪರಿಣಾಮಕಾರಿ ಸುಮಾರು 10 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತಾರಗೊಂಡು, ಸ್ಥಳೀಯ ತಳಿಗಿಂತ ಶೇ, 20–30% ರಷ್ಟು ಅಧಿಕ ಇಳುವರಿ ಕೊಡುತ್ತಿದೆ, ಈ ತಳಿಯ ಬರ ನಿರೋಧಕ ಗುಣದಿಂದ ಜನಪ್ರಿಯತೆ ಹೆಚ್ಚಾಗಿ, ರೈತರ ಜೀವನದಲ್ಲಿ ಆಶಾಕಿರಣ ಮೂಡಿಸಿದೆ.

**ಎಂ, ಎಲ್–322 ತಳಿಯ ಗುಣ ವಿಶೇಷತೆಗಳು:**

✓ಬರ ನಿರೋಧಕ ಶಕ್ತಿಯನ್ನು ಹೊಂದಿರುವ ಕಾರಣ ಕಡಿಮೆ ಮಳೆ ಆಶ್ರಯದಲ್ಲಿ ಬೆಳೆಯಬಹುದು.

✓ಖುಷ್ಕಿ ಬೇಸಾಯದಲ್ಲಿ ಹೆಚ್ಚಿನ ಧಾನ್ಯದ ಹಾಗೂ ಮೇವಿನ ಇಳುವರಿಯನ್ನು ಕೊಡುತ್ತದೆ. [ಖುಷ್ಕಿ 12–14 ಕ್ವಿ/ಎಕರೆ, ನಿರಾವರಿ 16–18 ಕ್ವಿ/ಎಕರೆ] ಅಲ್ಲದೆ ಮೇವಿನ ಇಳುವರಿ 2.4–2.6 ಟನ್/ಎಕರೆ.

✓ಮಧ್ಯಮ ಅವಧಿ ತಳಿಯಾಗಿದ್ದು [105–110 ದಿನಗಳು], ಎತ್ತರವಾಗಿ ಬೆಳೆಯುವ ತಳಿಯಾಗಿರುತ್ತದೆ.

✓ಇಲುಕು ಮತ್ತು ಕುತ್ತಿಗೆ ಬೆಂಕಿ ರೋಗಗಳ ನಿರೋಧಕ ಶಕ್ತಿಯನ್ನು ಹೊಂದಿರುತ್ತದೆ.

✓ಕಾಂಡ ಗಟ್ಟಿಯಾಗಿರುವುದರಿಂದ ಕೊನೆಯ ಹಂತದಲ್ಲಿ ಬೆಳೆ ಬೀಳುವಿಕೆ ಕಡಿಮೆಯಾಗುತ್ತದೆ.

✓ಬಿತ್ತನೆ ಕಾಲ ಮುಂಗಾರು ಜೂನ್–ಸೆಪ್ಟಂಬರ್ ಮತ್ತು ಬೇಸಿಗೆಯಲ್ಲಿ [ನೀರಾವರಿ] ಫೆಬ್ರವರಿ–ಮೇ

## ತರಬೇತಿ ಕಾರ್ಯಕ್ರಮಗಳು

### ಒಳ ಅವರಣ ತರಬೇತಿಗಳು

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1 | ಹುಣಸೆಯ ಮೌಲ್ಯವರ್ಧಿತ ಪದಾರ್ಥಗಳು | 08/01/2025 | 35 |
| 2 | ಕೆ.ವಿ.ಕೆ.ಗೆ ಅಕ್ಷರ ಪೋದಾಸ್ ಶಾಲೆಯ ಮಕ್ಕಳ ಪರಿಚಯ ಭೇಟಿ | 04/01/2025 | 45 |
| 3 | ಸರ್ಕಾರಿ ಪ್ರೌಢಶಾಲೆ, ಗ್ಯಾರಘಟ್ಟ, ತಿಪಟೂರು ತಾಲ್ಲೂಕು, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ಧತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 08/01/2025 | 42 |
| 4 | ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೋಡಿಹಳ್ಳಿ, ಬೋವಿ ಕಾಲೋನಿ, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ಧತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 08/01/2025 | 13 |
| 5 | ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಸೂರನಹಳ್ಳಿ, ಬೋವಿ ಕಾಲೋನಿ, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ಧತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 08/01/2025 | 19 |
| 6 | ಸರ್ಕಾರಿ ಪ್ರೌಢಶಾಲೆ, ಗೌಡನಕಟ್ಟೆ, ತಿಪಟೂರು ತಾಲ್ಲೂಕು, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ಧತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 09/01/2025 | 29 |
| 7 | ಕರ್ನಾಟಕ ಪಬ್ಲಿಕ್ ಶಾಲೆ, ಹೊನ್ನವಳ್ಳಿ, ತಿಪಟೂರು ತಾಲ್ಲೂಕು, ಕೃಷಿ ವಿಜ್ಞಾನ ಕೇಂದ್ರಕ್ಕೆ ಶಾಲಾ ವಿದ್ಯಾರ್ಥಿಗಳಿಂದ ಶೈಕ್ಷಣಿಕ ಪ್ರವಾಸ (ಸಾವಯವ ಕೃಷಿ, ಮಣ್ಣು ಪರೀಕ್ಷೆ, ತಾರಸಿ ಕೈ ತೋಟ, ಸಮಗ್ರ ಕೃಷಿ ಪದ್ಧತಿ, ತೆಂಗಿನ ಕಾಯಿ ಸುಲಿಯುವ ಯಂತ್ರದ ಪ್ರಾತ್ಯಕ್ಷಿಕೆ) | 16/01/2025 | 69 |
| 8 | ಪಶು ಸಂಗೋಪನೆ ಇಲಾಖೆ ವತಿಯಿಂದ ರೈತರ ಕ್ಷೇತ್ರಬೇಟಿ (ಕುಣಿಗಲ್ ತಾ.) | 21/01/2025 | 16 |
| 9 | ಮಣ್ಣು ಮತ್ತು ನೀರು ಪರೀಕ್ಷೆಯ ಪ್ರಾಮುಖ್ಯತೆ | 21/02/2025 | 100 |
| 10 | ತುಮಕೂರಿನ ಮದ್ರಾಸ್ ಫರ್ಟಿಲೈಸರ್ ಲಿಮಿಟೆಡ್‌ನ ಸಹಯೋಗದೊಂದಿಗೆ ಸಾವಯವ ಕೃಷಿಯ ಪ್ರಾಮುಖ್ಯತೆ ಕುರಿತು ತರಬೇತಿ | 28/02/2025 | 49 |

# ತರಬೇತಿ ಕಾರ್ಯಕ್ರಮಗಳು

## ಹೊರಾವರಣ ತರಬೇತಿಗಳು

| ಕ್ರ.ಸಂ. | ಹೊರಾವರಣ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಜೇನು ಕೃಷಿ ಕುರಿತು ತರಬೇತಿ ಕಾರ್ಯಕ್ರಮ | ತಡಸೂರು, ತಿಪಟೂರು ತಾ. | 08/01/2025 | 08 |
| 2 | ತೆಂಗಿನಲ್ಲಿ ಸಮಗ್ರ ಪೀಡೆ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ | ಕುಣಿಗಲ್ | 12/01/2025 | 30 |
| 3 | ಹಿತ್ತಲ ಕೋಳಿಗಳ ಸಾಕಾಣಿಕೆ ಮತ್ತು ವಾಣಿಜ್ಯ ಕೋಳಿ ಸಾಕಾಣಿಕೆಯಲ್ಲಿ ಗುತ್ತಿಗೆ ಆಧಾರದ ನಿಯಮಾವಳಿಗಳು | ಹೆಚ್. ಆಲದಹಳ್ಳಿ, ಚನ್ನರಾಯಪಟ್ಟಣ ತಾ | 17/01/2025 | 30 |
| 4 | ಅಣಬೆ ಕೃಷಿ ಮತ್ತು ಮೌಲ್ಯವರ್ಧನೆ ಕುರಿತು ತರಬೇತಿ | ಹಾಗಲವಾಡಿ, ಗುಬ್ಬಿ ತಾ. | 08/03/2025 | 30 |

## ಪ್ರಾಯೋಜಿತ ತರಬೇತಿಗಳು

| ಕ್ರ.ಸಂ. | ವಿಷಯ | ದಿನಾಂಕ | ಒಟ್ಟು |
|---|---|---|---|
| 1 | ಕೃಷಿ ಸಖಿ ಮಾಡ್ಯೂಲ್–3 (ಬ್ಯಾಚ್–3) | 06/01/2025 ರಿಂದ 11/01/2025 | 34 |
| 2 | ಕೃಷಿ ಸಖಿ ಮಾಡ್ಯೂಲ್–3 (ಬ್ಯಾಚ್–4) | 20/01/2025 ರಿಂದ 25/01/2025 | 34 |
| 3 | ಕೃಷಿ ಸಖಿ 6ನೇ ಬ್ಯಾಚ್ ತರಬೇತಿ | 03/02/2025 ರಿಂದ 08/02/2025 | 30 |
| 4 | ಕೃಷಿ ಸಖಿ 7ನೇ ಬ್ಯಾಚ್ ತರಬೇತಿ | 03/02/2025 ರಿಂದ 08/02/2025 | 34 |
| 5 | ಕೃಷಿ ಸಖಿ 8ನೇ ಬ್ಯಾಚ್ ತರಬೇತಿ | 10/02/2025 ರಿಂದ 15/02/2025 | 32 |
| 6 | ಕೃಷಿ ಸಖಿ 9ನೇ ಬ್ಯಾಚ್ ತರಬೇತಿ | 10/02/2025 ರಿಂದ 15/02/2025 | 30 |
| 7 | ಕೃಷಿ ಸಖಿ ತರಬೇತಿ | 03/03/2025 ರಿಂದ 08/03/2025 | 34 |
| 8 | ತೆಂಗಿನ ಮರ ಹತ್ತುವಿಕೆ ತರಬೇತಿ | 10/03/2025 ರಿಂದ 15/03/2025 | 20 |

## ಪ್ರಮುಖ ದಿನಗಳು / ಕಾರ್ಯಕ್ರಮಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | 19ನೇ ಕಂತಿನ ಪಿ.ಎಂ. ಕಿಸಾನ್ ಸಮ್ಮಾನ್ ನಿಧಿ ಕಾರ್ಯಕ್ರಮ | ಗುರುಕುಲ ಕಲ್ಯಾಣ ಮಂಟಪ, ತಿಪಟೂರು ತಾ. | 24/02/2025 | 965 |
| 2 | ವಿಶ್ವ ಮಹಿಳಾ ದಿನಾಚರಣೆ 2025 ಕಾರ್ಯಕ್ರಮ | ಹಾಗಲವಾಡಿ, ಗುಬ್ಬಿ ತಾ. | 08/03/2025 | 30 |

## ಕ್ಷೇತ್ರೋತ್ಸವಗಳು

| ಕ್ರ. ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು |
|---|---|---|---|---|
| 1. | ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ಬಂಡ್ರೆಹಳ್ಳಿ, ಚಿಕ್ಕನಾಯಕನಹಳ್ಳಿ | 15/01/2025 | 28 |
| 2. | ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ಕಮಲಾಪುರ, ಚಿಕ್ಕನಾಯಕನಹಳ್ಳಿ | 18/01/2025 | 34 |
| 3. | ತರಕಾರಿ ಸಸಿಗಳ ಉತ್ಪಾದನೆಯಲ್ಲಿ ಅರ್ಕಾ ಕೋಕೊಪಿಟ್ ಬಳಕೆ | ತಿಪಟೂರು, ತಿಪಟೂರು | 20/01/2025 | 25 |
| 4. | ಶ್ರಮ ಹಾಗೂ ಸಮರ್ಪಕ ಸಮಯದ ನಿರ್ವಹಣೆಗೆ ತೆಂಗಿನಕಾಯಿ ಸುಲಿಯುವ ಯಂತ್ರದ ಬಳಕೆಯ | ಕೊನೇಹಳ್ಳಿ, ತಿಪಟೂರು | 22/01/2025 | 45 |
| 4. | ಹರಳಿನಲ್ಲಿ ಸಮಗ್ರ ಬೆಳೆ ನಿರ್ವಹಣೆ – ಕೃಷಿ ಉನ್ನತಿ ಯೋಜನೆ | ಚಿಕ್ಕಬಿದರೆ | 23/01/2025 | 22 |


## ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು:

**ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,**
**ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ,**
**ತಿಪಟೂರು, ತುಮಕೂರು ಜಿಲ್ಲೆ**